Fax: 08282-256262
E-mail:kuvempuacademic@gmail.com

Phone No – 08282-256149
Website:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ-6: 1029:2023-24 ದಿನಾಂಕ:15-06-2023.

## ಸುತ್ತೋಲೆ

ವಿಷಯ: 2023-24ನೇ ಸಾಲಿನ ನವಭಾರತ ಸಾಕ್ಷರತಾ ಕಾರ್ಯಕ್ರಮ ಬೋಧಕರಾಗಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರನ್ನಾಗಿ ಮಾಡುವ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಸ್ವೀಕೃತವಾದ ಮನವಿಯನ್ನು ಅಗತ್ಯ ಕ್ರಮಕೈಗೊಳ್ಳುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 21 ವಿವಿಧ 2023ದಿನಾಂಕ:26-04-2023.

*****

ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಇವರು ಉಲ್ಲೇಖಿತ(1)ರ ಪತ್ರದನ್ವಯ 2023-24ನೇ ಸಾಲಿನ ನವಭಾರತ ಸಾಕ್ಷರತಾ ಕಾರ್ಯಕ್ರಮದ ಫಲಾನುಭವಿಗಳಾದ ಅನಕ್ಷರಸ್ಥರಿಗೆ ಬೋಧನೆ ಮೂಲಕ ಎಲ್ಲಾ ಅನಕ್ಷರಸ್ಥರು 2022-27ರ ಅವಧಿಯೊಳಗೆ ಸಂಪೂರ್ಣ ಸಾಕ್ಷರರನ್ನಾಗಿ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ಉಪಯೋಗಕ್ಕಾಗಿ ಅನುಷ್ಠಾನ / ಕ್ರಮಕೈಗೊಳ್ಳಲು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಸಂಯೋಜಿತ, ಘಟಕ ಮತ್ತು ನೇರ ಆಡಳಿಕ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಮತ್ತು ಎಲ್ಲಾ ವಿಭಾಗದ ಅಧ್ಯಕ್ಷರುಗಳು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲು ತಿಳಿಸಿರುತ್ತಾರೆ.

- ಅನಕ್ಷರಸ್ಥರನ್ನು ಅಕ್ಷರರನ್ನಾಗಿಸುವ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಕೋರ್ಸ್ ನ ಅಂಗವಾಗಿ ಪ್ರಾಜೆಕ್ಟ್ / ಅಸೈನ್ ಮೆಂಟ್ ರೂಪದಲ್ಲಿ ವಿದ್ಯಾರ್ಥಿಯು ತನ್ನ ಪದವಿ ಪೊರೈಸುವುದರೊಳಗಾಗಿ ಕನಿಷ್ಠ 5 ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು ಎಂಬುದು ಪ್ರಮುಖ ಅಂಶವಾಗಿದೆ.
- ಅದೇ ರೀತಿ ಯುಜಿಸಿ ಅಡಿಯಲ್ಲಿ ಬರುವ Under Graduate / Post- Graduate ಮತ್ತು ಇನ್ನಿತರೆ ಉನ್ನತ ಶಿಕ್ಷಣ ಕೋರ್ಸ್ ಗಳಲ್ಲಿ ಈ ಮೇಲಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರಿಗೆ Credits ಅನ್ನು ಆ ವಿದ್ಯಾರ್ಥಿಯು ಅನಕ್ಷರಸ್ಥರನ್ನು "ಅಕ್ಷರಸ್ಥರನ್ನಾಗಿಸಿದ (Literate) ನಂತರ ನೀಡುವುದು.
- ಈ ರೀತಿ ತೊಡಗಿಸಿಕೊಂಡ ವಿದ್ಯಾರ್ಥಿಗಳಿಗೆ / ಸ್ವಯಂ ಸೇವಕರಿಗೆ Certificate ಗಳನ್ನು ನೀಡುವುದು.
- ಸದರಿ ವಿದ್ಯಾರ್ಥಿಗಳಿಗೆ NILP ಮಾರ್ಗಸೂಚಿಯ ಬಗ್ಗೆ ತರಬೇತಿ ಬಗ್ಗೆ ನೀಡುವುದು.

ಮೇಲಿನ ಅಂಶಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಸಂಯೋಜಿತ, ಘಟಕ ಮತ್ತು ನೇರ ಆಡಳಿಕ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಮತ್ತು ಎಲ್ಲಾ ವಿಭಾಗದ ಅಧ್ಯಕ್ಷರುಗಳು ಪರಿಶೀಲಿಸಿ 2023-24ನೇ ಸಾಲಿನ ನವ ಭಾರತ ಸಾಕ್ಷರತಾ ಕಾರ್ಯಕ್ರಮದ ಉತ್ತಮ ಅನುಷ್ಠಾನಕ್ಕಾಗಿ ರಾಜ್ಯದ ಪ್ರತಿ ಜಿಲ್ಲೆಯ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಅನಕ್ಷರಸ್ಥರ ಸಂಖ್ಯೆ ಮತ್ತು ಕಲಿಕಾ ಕೇಂದ್ರಗಳ ವಿವರ ಲಭ್ಯವಿದ್ದು, ಸದರಿಯವರಿಂದ ಮಾಹಿತಿಯನ್ನು ಪಡೆದು ಮುಂದಿನ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಕುಲಸಚಿವರಿಂದ ಕರಡು ಅನುಮೋದನೆಯಾಗಿದೆ.

ಉಪಕುಲಸಚಿವ

ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

ಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಕ್ಷರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ / ಶಿವಮೊಗ್ಗ / ಕಡೂರು / ಚಿಕ್ಕಮಗಳೂರು.
2. ಎಲ್ಲಾ ಸಂಯೋಜಿತ / ಘಟಕ ಮತ್ತು ನೇರ ಆಡಳಿತ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ, / ಶಿವಮೊಗ್ಗ / ಕಡೂರು / ಚಿಕ್ಕಮಗಳೂರು.

**ಪ್ರತಿ:**

1. ಕಛೇರಿ ಪ್ರತಿ

15/6/2023